ಸಮಗ್ರ ಶಿಕ್ಷಣ-ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ: ಎಸ್.ಎಸ್.ಕೆ./ಗು.ಖಾ./ನಲಿಕಲಿ/ಪಿ.ಎಂ.ಯು./2022-23 ದಿನಾಂಕ: 30.07.2022

## ಸುತ್ತೋಲೆ

**ವಿಷಯ: 2022-23ನೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಗೊಳಿಸಲಾಗಿರುವ 'ಕಲಿಕಾ ಚೇತರಿಕೆ' ಉಪಕ್ರಮವನ್ನು ಶಾಲಾ ಹಂತದಲ್ಲಿ ಬಲವರ್ಧನೆಗೊಳಿಸುವ ಕುರಿತು**

ಉಲ್ಲೇಖ: 1. ಡಿ.ಎಸ್.ಇ.ಆರ್.ಟಿ/ ಇ.ವಿ.ಜಿ/ 2022-23 ಅಹಾ/32/2021-22 ದಿನಾಂಕ: 14.03.2022

2. ದಿನಾಂಕ: 12.07.2022 ರಂದು ಮಾನ್ಯ ರಾ.ಯೋ.ನಿ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ ಪಿ.ಎಂ.ಯು ಸಭೆಯ ಚರ್ಚಾಂಶಗಳು

3. ದಿನಾಂಕ:27.07.2022ರ ಪಿ.ಎಂ.ಯು ಸಭೆಯ ನಡವಳಿ ಮೇಲಿನ ನಿರ್ಣಯ ಮತ್ತು ಕ್ರಮ

*****

ಹಿನ್ನೆಲೆ:

ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಕೊರತೆಯನ್ನು ಸರಿದೂಗಿಸಲು ನೆರವಾಗುವಂತೆ 01 ರಿಂದ 09ನೇ ತರಗತಿಗಳ ವಿದ್ಯಾರ್ಥಿಗಳಿಗೆ ಘನ ಕರ್ನಾಟಕ ಸರ್ಕಾರವು 'ಕಲಿಕಾ ಚೇತರಿಕೆ' ಎಂಬ ಉಪಕ್ರಮವನ್ನು ಘೋಷಿಸಿ, ಕಡ್ಡಾಯವಾಗಿ ಅನುಷ್ಠಾನಿಸಲು ನಿರ್ದೇಶಿಸಿರುವುದನ್ನು ಮತ್ತೊಮ್ಮೆ ಸ್ಮರಿಸಬಹುದಾಗಿದೆ. 2022-23ನೇ ಶೈಕ್ಷಣಿಕ ಅವಧಿಗೆ ಪೂರಕವಾಗಿ ಶಾಲಾ ಶಿಕ್ಷಣ ವ್ಯಾಪ್ತಿಗೆ ಅನುಷ್ಠಾನಿಸಲಾಗಿರುವ ಸದರಿ ಕಾರ್ಯಕ್ರಮದ ಅಡಿಯಲ್ಲಿ ವಿದ್ಯಾರ್ಥಿಗಳಿಗಾಗಿ ಕಲಿಕೆಯ ಹಾಳೆಗಳು/ಚಟುವಟಿಕೆ ಪುಸ್ತಕಗಳನ್ನು ಹಾಗೂ ಶಿಕ್ಷಕರಿಗಾಗಿ ಸುಗಮಕಾರರ ಕೈಪಿಡಿಗಳನ್ನು ತರಗತಿವಾರು ಮತ್ತು ವಿಷಯವಾರು ಸಿದ್ಧಪಡಿಸಿ, ಮುದ್ರಿಸಿ, ಎಲ್ಲಾ ಶಾಲೆಗಳಿಗೂ ಒದಗಿಸಲು ಈಗಾಗಲೇ ಇಲಾಖೆ ವತಿಯಿಂದ ಕ್ರಮವಹಿಸಲಾಗಿರುತ್ತದೆ. ಅನುಷ್ಠಾನ ಕುರಿತಂತೆ ಎಲ್ಲಾ ಶಿಕ್ಷಕರಿಗೂ ತರಬೇತಿಯನ್ನು ಸಹ ನೀಡಲಾಗಿರುತ್ತದೆ.

'ಕಲಿಕಾ ಚೇತರಿಕೆ' ಉಪಕ್ರಮವನ್ನು ಎಲ್ಲಾ ಶಾಲೆಗಳಲ್ಲಿಯೂ ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಒಳಪಡಿಸಲು ಮತ್ತು ಕಾಲಕಾಲಕ್ಕೆ ಕಾರ್ಯಕ್ರಮದ ಅನುಷ್ಠಾನಾತ್ಮಕ ಪ್ರಗತಿಯನ್ನು ಅನುಪಾಲನೆಗೊಳಿಸಲು ಜಿಲ್ಲೆ ಹಾಗೂ ಬ್ಲಾಕ್ ಹಂತದ ಅಧಿಕಾರಿಗಳು, ಕ್ಷೇತ್ರ ಮತ್ತು ಕ್ಲಸ್ಟರ್ ಹಂತದ ಸಂಪನ್ಮೂಲ ವ್ಯಕ್ತಿಗಳು ತಮ್ಮ ತಮ್ಮ ಹಂತದಲ್ಲಿ ಯೋಜಿತ ಕಾರ್ಯಚಟುವಟಿಕೆಗಳನ್ನು ರೂಪಿಸಿ, ಶಾಲೆಗಳಲ್ಲಿ ಅಳವಡಿಸಲು ಅಗತ್ಯ ಕ್ರಮವಹಿಸುವಂತೆ ನಿರ್ದೇಶಿಸಿದೆ.

**'ಕಲಿಕಾ ಚೇತರಿಕೆ' ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸೂಚಿಸಲಾಗಿರುವ ಅಗತ್ಯ ಕ್ರಮಗಳು**

1. **ಜಾಗೃತಿ/ಅರಿವು ಮೂಡಿಸುವ ಸಮುದಾಯ ಆಧಾರಿತ ಚಟುವಟಿಕೆಗಳು:**

   - '**ಆಗಸ್ಟ್-2022**'ರ ಮಾಹೆಯನ್ನು ಪೋಷಕ ಹಾಗೂ ಭಾಗೀದಾರರ ಜಾಗೃತಿ ಮಾಹೆಯನ್ನಾಗಿ ಗುರುತಿಸಲಾಗಿದ್ದು, ಸದರಿ ಮಾಹೆಯಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮದ ಬಗ್ಗೆ ಹಾಗೂ ವಿದ್ಯಾರ್ಥಿಗಳಿಗೆ ಇಲಾಖೆ ವತಿಯಿಂದ ವಿತರಿಸಲಾಗಿರುವ ಚಟುವಟಿಕೆ ಪುಸ್ತಕಗಳ/ಕಲಿಕೆಯ ಹಾಳೆಗಳ ಬಗ್ಗೆ ಹಾಗೂ ಅವುಗಳ

ಬಳಕೆಗೆ ಶಾಲೆಗಳಲ್ಲಿ ತೆಗೆದುಕೊಳ್ಳಲಾಗಿರುವ ಕ್ರಮಗಳನ್ನು ಕುರಿತು ಜಾಗೃತಿಯನ್ನು ಮೂಡಿಸಲು ಪೋಷಕರ ಸಭೆಯನ್ನು ಆಯೋಜಿಸುವುದು.

- ಶಾಲಾ ಶಿಕ್ಷಣ ವ್ಯಾಪ್ತಿಯಲ್ಲಿನ ಗ್ರಾಮ/ತಾಲ್ಲೂಕು ಪಂಚಾಯಿತಿ ಭಾಗೀದಾರರು, ಎಸ್.ಡಿ.ಎಂ.ಸಿ. ಸದಸ್ಯರು ಹಾಗೂ ಇತರೆ ಶಿಕ್ಷಣಾಸಕ್ತರನ್ನು ಶಾಲಾ ವ್ಯಾಪ್ತಿಯೆಡೆಗೆ ಆಹ್ವಾನಿಸಿ, ಸದರಿ ಕಾರ್ಯಕ್ರಮದ ಬಗ್ಗೆ ಅರಿವನ್ನು ಮೂಡಿಸುವುದು.
- ವಿವಿಧ ವಲಯದ ಭಾಗೀದಾರರನ್ನು ಶಾಲಾ ವ್ಯಾಪ್ತಿಯ ಕಡೆಗೆ ಸೆಳೆಯಲು ಮತ್ತು ಕಾರ್ಯಕ್ರಮ ಕುರಿತಂತೆ ಅರಿವು ಮೂಡಿಸಲು ಕಲಿಕೋಪಕರಣಗಳ ಮೇಳ, ತಾಯಂದಿರ ಸಭೆ, ಮಕ್ಕಳಿಂದಾದ ಚಟುವಟಿಕೆಗಳ ಪ್ರದರ್ಶನ, ಮೆಟ್ರಿಕ್ ಮೇಳ ಇತ್ಯಾದಿ ನಾವೀನ್ಯ ಸ್ವರೂಪದ ಚಟುವಟಿಕೆಗಳನ್ನು ಆಯೋಜಿಸಿ, ಜಾಗೃತಿಗೆ ಕ್ರಮವಹಿಸುವುದು. ಆಯಾಯ ಪ್ರಾದೇಶಿಕ ವಲಯದ ರೇಡಿಯೋ ಸೇವೆಯನ್ನು ಸಹ ಜಾಗೃತಿಗಾಗಿ ಬಳಸಿಕೊಳ್ಳಬಹುದು.

**2. ಕ್ಲಸ್ಟರ್/ಹೋಬಳಿ/ಬ್ಲಾಕ್ ಹಂತದಲ್ಲಿ ಆಯೋಜಿಸುವ ಪ್ರಗತಿ ಪರಿಶೀಲನಾ ಸಭೆಗಳು:**

✓ **'ಮೊದಲ ಶನಿವಾರ'** ಕಿರಿಯ ಪ್ರಾಥಮಿಕ ತರಗತಿಗಳ ಶಿಕ್ಷಕರನ್ನು, **'ಮೂರನೇ ಶನಿವಾರ'** ಹಿರಿಯ ಪ್ರಾಥಮಿಕ ತರಗತಿಗಳ ಶಿಕ್ಷಕರನ್ನು ಕ್ಲಸ್ಟರ್ ಹಂತಕ್ಕೆ/ಆಯ್ಕೆ ಮಾಡಿಕೊಂಡ ಶಾಲೆಗೆ ಆಹ್ವಾನಿಸಿ, ಕಲಿಕಾ ಚೇತರಿಕೆ ಅಳವಡಿಕೆ ಕುರಿತಂತೆ ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸುವುದು. **ಅಥವಾ**

✓ 01 ರಿಂದ 05ನೇ ತರಗತಿವರೆಗಿನ ವಿಷಯ ಕಲಿಸುವ ಶಿಕ್ಷಕರನ್ನು ಮೊದಲ ಶನಿವಾರ, 06 ರಿಂದ 08ನೇ ತರಗತಿವರೆಗಿನ ಶಿಕ್ಷಕರನ್ನು ಮೂರನೇ ಶನಿವಾರ ಆಹ್ವಾನಿಸಿ, ಸದರಿ ಕಾರ್ಯಕ್ರಮದ ಅಡಿಯಲ್ಲಿ ವಿನ್ಯಾಸಗೊಳಿಸಿರುವ ಕಲಿಕೆಯ ಹಾಳೆಗಳ ಅನುಷ್ಠಾನ ಮತ್ತು ಪೂರಕ ಚಟುವಟಿಕೆಗಳನ್ನು ಕುರಿತಂತೆ ಚರ್ಚಿಸಿ ಮಾರ್ಗದರ್ಶಿಸಲು ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸುವುದು.

✓ **'ನಾಲ್ಕನೇ ಶನಿವಾರ'** ಪ್ರೌಢಶಾಲಾ ಶಿಕ್ಷಕರನ್ನು ಹೋಬಳಿ/ಬ್ಲಾಕ್ ಹಂತಕ್ಕೆ ಆಹ್ವಾನಿಸಿ, ವಿಷಯವಾರು ಕಲಿಕೆಯ ಹಾಳೆಗಳ ಅನುಷ್ಠಾನ ಮತ್ತು ಎದುರಾದ ಸಮಸ್ಯೆಗಳಿಗೆ ಮಾರ್ಗದರ್ಶನ ಒದಗಿಸಲು ಪ್ರಗತಿ ಪರಿಶೀಲನಾ ಸಭೆಗಳನ್ನು ಆಯೋಜಿಸುವುದು.

✓ ಮಾಹೆವಾರು ಅನುಷ್ಠಾನಿಸಬೇಕಾದ ಕಲಿಕಾ ಚೇತರಿಕೆ ಚಟುವಟಿಕೆ ಕುರಿತಂತೆ ಶಿಕ್ಷಕರೊಂದಿಗೆ ಚರ್ಚಿಸಿ, ಮಾರ್ಗದರ್ಶಿಸಲು ಸದರಿ ಪ್ರಗತಿ ಪರಿಶೀಲನಾ ಸಭೆಗಳಿಗೆ ನೆರವಾಗುವಂತೆ ಜಿಲ್ಲೆ/ಬ್ಲಾಕ್ ಹಂತದಲ್ಲಿ ನಿರ್ದಿಷ್ಟಪಡಿಸಿದ ಕಾರ್ಯಸೂಚಿ/ಅಜೆಂಡಾವನ್ನು ಸಿದ್ಧಪಡಿಸಿ ಒದಗಿಸಲು ಅಧಿಕಾರಿಗಳು ಕ್ರಮವಹಿಸುವುದು.

**2. ಅನುಸರಣೆಗೆ ಪೂರಕವಾಗಿರುವ ಶೈಕ್ಷಣಿಕ ಮಾರ್ಗದರ್ಶಿತ ಅಂಶಗಳು:**
**(01 ರಿಂದ 03ನೇ ತರಗತಿಗೆ ಪೂರಕವಾಗಿ)**

❖ **'ವಿದ್ಯಾ ಪ್ರವೇಶ'** ಕಾರ್ಯಕ್ರಮವು ಆಗಸ್ಟ್-31ಕ್ಕೆ ಅಂತ್ಯಗೊಳ್ಳುತ್ತಿದ್ದು, ಮಕ್ಕಳಿಗಾಗಿ ನೀಡಲಾಗಿರುವ ಚಟುವಟಿಕೆ ಪುಸ್ತಕಗಳಲ್ಲಿನ ಮೌಲ್ಯಮಾಪನ ದಾಖಲೆಗಳನ್ನು ಸಂಗ್ರಹಿಸಿ, ಅವರವರ ಹೆಸರಿನ ಕೃತಿ ಸಂಪುಟದಲ್ಲಿ ಸೇರ್ಪಡೆಗೊಳಿಸಲು ಕ್ರಮವಹಿಸುವಂತೆ ಎಲ್ಲಾ ನಲಿಕಲಿ ಘಟಕದ ಶಿಕ್ಷಕರಿಗೆ ಸೂಚಿಸುವುದು.

❖ ನಲಿಕಲಿ ಘಟಕಗಳಲ್ಲಿ **'ಕಲಿಕಾ ಚೇತರಿಕೆ'** ಕಾರ್ಯಕ್ರಮವು **'ಸೆಪ್ಟೆಂಬರ್-01 ರಿಂದ ಆರಂಭಗೊಂಡು, ಮಾರ್ಚ್ 31, 2023ಕ್ಕೆ'** ಮುಕ್ತಾಯಗೊಳ್ಳುತ್ತದೆ. 01 ರಿಂದ 03ನೇ ತರಗತಿವರೆಗಿನ ನಲಿಕಲಿ ಘಟಕದ ಶಿಕ್ಷಕರು ಕಲಿಕಾ ಚೇತರಿಕೆ ಕೈಪಿಡಿಯಲ್ಲಿ ನೀಡಿರುವ ಪರಿಷ್ಕೃತ ಪ್ರಗತಿ ನೋಟದಂತೆಯೇ ತರಗತಿಯ ಕಲಿಕಾ ಪ್ರಕ್ರಿಯೆಯನ್ನು

ಅಳವಡಿಕೊಳ್ಳುವುದು. ಈ ಹಿಂದೆ ಘಟಕದ ಶಿಕ್ಷಕರಿಗೆ ಸೂಚಿಸಿರುವಂತೆ **'ದಿನಚರಿ'** ಬರೆಯಲು ಕ್ರಮವಹಿಸುವುದು.

❖ ಕಲಿಕಾ ಚೇತರಿಕೆಗೆ ಸಂಬಂಧಿಸಿದಂತೆ 01 ರಿಂದ 03ನೇ ತರಗತಿವರೆಗೆ ಕೆ.ಟಿ.ಬಿ.ಎಸ್ ವತಿಯಿಂದ ಸರಬರಾಜು ಮಾಡಲಾಗಿರುವ ಕನ್ನಡ ಭಾಷೆ, ಗಣಿತ ಹಾಗೂ ಇಂಗ್ಲಿಷ್ ಭಾಷೆಯ ರೆಗ್ಯೂಲರ್ ಅಭ್ಯಾಸ ಪುಸ್ತಕಗಳನ್ನು ಮತ್ತು ಕಲಿಕಾ ಚೇತರಿಕೆಯಲ್ಲಿನ ನಿಪುಣ್ ಭಾರತ್ ಚಟುವಟಿಕೆಯ ಪುಸ್ತಕಗಳನ್ನು ಪರಿಷ್ಕೃತ ಪ್ರಗತಿನೋಟದಲ್ಲಿ ಸೂಚಿಸಿರುವಂತೆಯೇ ತರಗತಿಗಳಲ್ಲಿ ಬಳಸಲು ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡುವುದು. (**N** ಸೂಚಿತ ಪುಸ್ತಕ ಎಂದರೆ, ನಿಪುಣ್ ಕಲಿಕಾ ಚೇತರಿಕೆ ಅಭ್ಯಾಸ ಪುಸ್ತಕ ಎಂದರ್ಥ)

❖ ನಲಿಕಲಿ ಘಟಕಗಳಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ ಪೂರಕವಾಗಿ 80 ನಿಮಿಷಗಳ 04 ಅವಧಿಗಳನ್ನು ನಿರ್ವಹಿಸತಕ್ಕದ್ದು. ಪ್ರಥಮ ಭಾಷೆ, ಗಣಿತ, ದ್ವಿತೀಯ ಭಾಷೆ ಇಂಗ್ಲಿಷ್ (ENK) ಮತ್ತು ಪರಿಸರ ಅಧ್ಯಯನದ ಅವಧಿಗಳನ್ನು ನಿರ್ವಹಿಸುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

❖ ಭಾಷೆ ಮತ್ತು ಗಣಿತ ವಿಷಯಕ್ಕೆ ಸಂಬಂಧಿಸಿದಂತೆ ಕಲಿಕಾ ಚೇತರಿಕೆ ಕೈಪಿಡಿಯಲ್ಲಿ ಸೂಚಿಸಲಾದ ಪರಿಷ್ಕೃತ ಕಲಿಕಾ ಏಣಿಯನ್ನು ತರಗತಿ ನಿರ್ವಹಣೆಗೆ ಅನುಸರಿಸುವುದು. ಇಂಗ್ಲಿಷ್ ಹಾಗೂ ಪರಿಸರ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕೆ.ಟಿ.ಬಿ.ಎಸ್ ವತಿಯಿಂದ ಈಗಾಗಲೇ ಸರಬರಾಜು ಮಾಡಲಾಗಿರುವ ಪ್ರಗತಿ ನೋಟದಂತೆಯೇ, ಕಾರ್ಯನಿರ್ವಹಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

❖ ಇಂಗ್ಲಿಷ್ ನಲಿಕಲಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಲಿಕಾ ಚೇತರಿಕೆ ಪುಸ್ತಕವನ್ನು ನೀಡುವುದಿಲ್ಲ. ಕೆ.ಟಿ.ಬಿ.ಎಸ್ ವತಿಯಿಂದ ಸರಬರಾಜುಗೊಂಡಿರುವ ಅಭ್ಯಾಸ ಪುಸ್ತಕಗಳನ್ನು ಚೇತರಿಕೆ ಭಾಗವಾಗಿ ಬಳಸುವಂತೆ ಶಿಕ್ಷಕರಿಗೆ ಮಾಹಿತಿ ಒದಗಿಸುವುದು. (ಕನ್ನಡ ಮತ್ತು ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೆ ಸಂಬಂಧಿಸಿದಂತೆ)

❖ 02 ಮತ್ತು 03ನೇ ತರಗತಿಗೆ ಸಂಬಂಧಿಸಿದಂತೆ ENK -MRP's ತರಬೇತಿ ಆಯೋಜನೆಗೆ ಇಲಾಖೆ ವತಿಯಿಂದ ಕ್ರಮವಹಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಪ್ರತೀ ಬ್ಲಾಕ್‌ನಲ್ಲಿ 05 ಮಂದಿ ಸಂಪನ್ಮೂಲ ಶಿಕ್ಷಕರು ಇದಕ್ಕಾಗಿಯೇ ಪರಿಣಿತರಾಗುವಂತೆ ಜಿಲ್ಲಾ ಮಟ್ಟದ ತರಬೇತಿಗೂ ಕ್ರಮವಹಿಸಲಾಗುವುದು. (ಈ ಬಗ್ಗೆ ಎಸ್.ಎಸ್.ಕೆ ವತಿಯಿಂದ ಅಗತ್ಯ ಮಾಹಿತಿ ಒದಗಿಸಲಾಗುವುದು)

❖ ಆಂಗ್ಲ ಮಾಧ್ಯಮದ ದ್ವಿಭಾಷಾ ಕಲಿಕಾ ಪ್ರಕ್ರಿಯೆ/ಬೈಲಿಂಗ್ಯೂವಲ್ ಬೋಧನಾ ಪದ್ಧತಿಯ ತರಗತಿಗಳಲ್ಲಿ ಕನ್ನಡ ಭಾಷೆಯ ಕಲಿಕೆಗೆ ಸಂಬಂಧಿಸಿದಂತೆ ಕನ್ನಡ ಮಾಧ್ಯಮದ ಶಾಲೆಗಳಿಗೆ ವಿತರಿಸಿದ ಕನ್ನಡದ ಪುಸ್ತಕವೇ ಇಲ್ಲಿಯೂ ಸರಬರಾಜುಗೊಂಡಿರುತ್ತದೆ. ಆದರೆ, ಇಂಗ್ಲಿಷ್ ಭಾಷೆ ಮತ್ತು ಗಣಿತ ವಿಷಯಕ್ಕೆ ಮಾತ್ರ ಪ್ರತ್ಯೇಕವಾದ ಕಲಿಕಾ ಚೇತರಿಕೆ ಪುಸ್ತಕಗಳು ಸರಬರಾಜುಗೊಳ್ಳುತ್ತಿದ್ದು, ಇದರಂತೆ ಪ್ರಕ್ರಿಯೆಗೆ ಕ್ರಮವಹಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

❖ ಕನ್ನಡ ಮತ್ತು ಉರ್ದು ಮಾಧ್ಯಮದ ನಲಿಕಲಿ ಘಟಕಗಳಿಗೆ ಹಾಗೂ ಆಂಗ್ಲ ವಿಭಾಗದ ತರಗತಿಗಳಿಗೆ ಈ ಬಾರಿ ಎಫ್.ಎಲ್.ಎನ್ ಚಟುವಟಿಕೆಗಳ ಅಡಿಯಲ್ಲಿ ENK Level-03 ರ ಸಾಮಗ್ರಿಗಳ ಜೊತೆಗೆ 40 ಇಂಗ್ಲಿಷ್ ಕಥಾ ಪುಸ್ತಕಗಳನ್ನು ಮುದ್ರಿಸಿ, ಸರಬರಾಜು ಕೈಗೊಳ್ಳಲು ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕ್ರಮವಹಿಸಲಾಗಿದೆ. ಬ್ಲಾಕ್ ಹಂತದಲ್ಲಿ ಇವುಗಳನ್ನು ಸ್ವೀಕರಿಸಿ, ಸದರಿ ಮಾಧ್ಯಮದ ತರಗತಿಗಳಿಗೆ ವಿತರಿಸುವುದು.

- ಕನ್ನಡ, ಆಂಗ್ಲ, ತಮಿಳು, ತೆಲುಗು, ಉರ್ದು ಹಾಗೂ ಮರಾಠಿ ಮಾಧ್ಯಮಗಳಲ್ಲಿ 01 ರಿಂದ 03ನೇ ತರಗತಿಯವರೆಗೂ ತರಗತಿವಾರು ಮತ್ತು ವಿಷಯವಾರು ಕಲಿಕಾ ಚೇತರಿಕೆಯ ಕೈಪಿಡಿಗಳನ್ನು ರಚಿಸಿರುವುದಿಲ್ಲ. ಬದಲಿಗೆ ಈ ಎಲ್ಲಾ ಮಾಧ್ಯಮಗಳಲ್ಲಿ ಮೂರು ತರಗತಿಗಳಿಗೂ ಸೇರಿದಂತೆ ಒಂದೇ ಶೀರ್ಷಿಕೆಯಲ್ಲಿ ಕಲಿಕಾ ಚೇತರಿಕೆ ಶಿಕ್ಷಕರ ಕೈಪಿಡಿಯನ್ನು ಸರಬರಾಜು ಮಾಡಲಾಗಿರುತ್ತದೆ. ಈ ಬಗ್ಗೆ ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ಒದಗಿಸುವುದು.
- ತಮಿಳು, ತೆಲುಗು ಹಾಗೂ ಮರಾಠಿ ಮಾಧ್ಯಮದ ಕಲಿನಲಿ ತರಗತಿಗಳಿಗೂ ಸಂಬಂಧಿಸಿದಂತೆ ಭಾಷೆ ಮತ್ತು ಗಣಿತ ವಿಷಯಕ್ಕಾಗಿ ಕಲಿಕಾ ಚೇತರಿಕೆ ಚಟುವಟಿಕೆ ಪುಸ್ತಕವನ್ನು ಹಾಗೂ ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಿ, ಮುದ್ರಿಸಿ ಸರಬರಾಜು ಮಾಡಲಾಗಿದೆ. ಕಲಿನಲಿ ತರಗತಿಗಳ ಶಿಕ್ಷಕರು ನಿಪುಣ್ ಭಾರತ್ ಕಲಿಕಾ ಚೇತರಿಕೆ ಚಟುವಟಿಕೆ ಪುಸ್ತಕವನ್ನು ಪಠ್ಯಪುಸ್ತಕದ ಪಠ್ಯಾಂಶಗಳ ಕಲಿಕೆಯ ನಂತರ ಪೂರಕ ಸಾಮಗ್ರಿಯಾಗಿ ಬಳಸುವಂತೆ ಮಾರ್ಗದರ್ಶನ ನೀಡುವುದು. ಸದರಿ ಚಟುವಟಿಕೆ ಪುಸ್ತಕಗಳಲ್ಲಿ ಬುನಾದಿ ಹಂತದ – ಎಫ್.ಎಲ್.ಎನ್ ಕಲಿಕೆಯ ಫಲಗಳ ಚಟುವಟಿಕೆಗಳಿಗೆ ಹೆಚ್ಚು ಆದ್ಯತೆಯನ್ನು ಕಲ್ಪಿಸಿದೆ.
- ಸಮಾಲೋಚನಾ ಸಭೆಗಳಲ್ಲಿ ಕಲಿನಲಿ ಪಠ್ಯಪುಸ್ತಕದೊಂದಿಗೆ ನಿಪುಣ್ ಚಟುವಟಿಕೆ ಪುಸ್ತಕವನ್ನು ಹೇಗೆ ಬಳಕೆಮಾಡಿಕೊಳ್ಳಬೇಕು ಮತ್ತು ತರಗತಿ ಪ್ರಕ್ರಿಯೆಗೆ ಹೇಗೆ ಮ್ಯಾಪಿಂಗ್ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಬಿ.ಆರ್.ಪಿ. ಹಾಗೂ ಸಿ.ಆರ್.ಪಿ.ಗಳು ಒಟ್ಟಾಗಿ ಸೇರಿ, ಪೂರ್ವ ತಯಾರಿ ಮಾಡಿಕೊಳ್ಳುವ ಮೂಲಕ ಈ ಮಾಧ್ಯಮಗಳ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನವನ್ನು ಒದಗಿಸುವುದು.

(04 ರಿಂದ 09ನೇ ತರಗತಿಗೆ ಪೂರಕವಾಗಿ)

- ಕಲಿಕಾ ಚೇತರಿಕೆಗೆ ಸಂಬಂಧಿಸಿದಂತೆ 04 ರಿಂದ 09ನೇ ತರಗತಿವರೆಗೆ ಸರಬರಾಜು ಮಾಡಲಾಗಿರುವ ಕಲಿಕೆಯ ಹಾಳೆಗಳು **'Perforated / ರಂಧ್ರ ಮಾದರಿ'** ವಿನ್ಯಾಸದಲ್ಲಿ ಕೂಡಿರುತ್ತವೆ. ಎಲ್ಲಾ ಕಲಿಕೆಯ ಹಾಳೆಗಳನ್ನು ವಿದ್ಯಾರ್ಥಿಗಳ ಕೃತಿ ಸಂಪುಟದಲ್ಲಿ ದಾಖಲಿಸುವ ಅವಶ್ಯಕತೆ ಇರುವುದಿಲ್ಲ. ಅಗತ್ಯ ಹಾಳೆಗಳನ್ನು ಮಾತ್ರ ಸೇರ್ಪಡೆಗೊಳಿಸುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು. ವಿನಾ ಕಾರಣ ಹಾಳೆಗಳನ್ನು ಹರಿಯದಂತೆ ಮಕ್ಕಳಿಗೆ ಸೂಚನೆ ನೀಡಲು ಶಿಕ್ಷಕರಿಗೆ ಮಾಹಿತಿ ಒದಗಿಸುವುದು.
- **04 ರಿಂದ 09ನೇ ತರಗತಿವರೆಗಿನ ಕಲಿಕಾ ಚೇತರಿಕೆ ಅನುಷ್ಠಾನದ ಕ್ರಮಗಳಿಗೆ ಈ ಹಿಂದೆ ಡಿ.ಎಸ್.ಇ.ಆರ್.ಟಿ. ಹೊರಡಿಸಿರುವ ಮಾರ್ಗದರ್ಶಿತ ಸುತ್ತೋಲೆಗಳನ್ನು ಮತ್ತು ವೆಬ್ಸೈಟ್‌ನಲ್ಲಿ ಅಪ್ಲೋಡ್ ಮಾಡಿರುವ ಸಾಹಿತ್ಯಗಳನ್ನು ಅವಲೋಕಿಸುವಂತೆ ಶಿಕ್ಷಕರಿಗೆ ಮಾಹಿತಿ ನೀಡುವುದು**

### 3. ಮೌಲ್ಯಮಾಪನ ದಾಖಲೆಯ ಅನುಸರಣೆಗೆ ಪೂರಕವಾಗಿರುವ ಅಂಶಗಳು:

- ಪ್ರಸ್ತುತ ವರ್ಷದಲ್ಲಿ ಕಲಿಕಾ ಚೇತರಿಕೆ ಅನುಷ್ಠಾನಗೊಳಿಸಿರುವ ಕಾರಣ, ಶಿಕ್ಷಕರಿಗೆ ದಾಖಲೆಯ ಹೊರೆಯಾಗದಂತೆ **FA-1, FA-2, FA-3, FA-4** ಪ್ರಗತಿಯನ್ನು **SATS** ನಲ್ಲಿ ಅಪ್ಡೇಟ್ ಮಾಡುವ ಅವಶ್ಯಕತೆ ಇರುವುದಿಲ್ಲ. ಬದಲಿಗೆ **SA-1, SA-2** ಪ್ರಗತಿಯನ್ನು **SATS** ನಲ್ಲಿ ಅಪ್ಡೇಟ್ ಮಾಡಲು ಕ್ರಮವಹಿಸುವಂತೆ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೂ ಹಾಗೂ ಸಹ ಶಿಕ್ಷಕರಿಗೂ ಮಾಹಿತಿ ಒದಗಿಸುವುದು.

### 4. ಶೈಕ್ಷಣಿಕ ಅನುಪಾಲನೆಗೆ ಪೂರಕವಾಗಿರುವ ಮಾರ್ಗದರ್ಶಿತ ಅಂಶಗಳು:

- ಕಲಿಕಾ ಚೇತರಿಕೆಯಲ್ಲಿ ನಿಗದಿಪಡಿಸಿರುವ ತರಗತಿವಾರು ಮತ್ತು ವಿಷಯವಾರು ಕಲಿಕೆಯ ಫಲಗಳ ಬಗೆಗಿನ ಜ್ಞಾನವನ್ನು ಬಿ.ಆರ್.ಪಿ., ಹಾಗೂ ಸಿ.ಆರ್.ಪಿ. ಹೊಂದಿರುವುದು ಮಾತ್ರವಲ್ಲದೇ, ಕ್ಲಸ್ಟರ್ ವ್ಯಾಪ್ತಿಯ ಶಿಕ್ಷಕರೆಲ್ಲರೂ ಈ ಬಗ್ಗೆ ಅಗತ್ಯ ಜ್ಞಾನ ಹೊಂದಿರುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

- ಕಲಿಕೆಯ ಹಾಳೆಗಳನ್ನು ಕೇವಲ ಬರವಣಿಗೆ, ಮನೆಗೆಲಸ ಮತ್ತು ಪೆನ್ನು ಪೇಪರ್ ಪರೀಕ್ಷೆಗಳಿಗೆ ಸೀಮಿತಗೊಳಿಸದೇ, ಮಕ್ಕಳಲ್ಲಿ ಅಪೇಕ್ಷಿತ ಕಲಿಕೆಯ ಫಲಗಳು ಸಾಧಿತವಾಗುವಂತೆ ನೋಡಿಕೊಳ್ಳುವ ಬಗ್ಗೆ ಗಮನಹರಿಸಲು ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ಬುನಾದಿ ಹಂತದ ಅಥವಾ ಹಿಂದಿನ ತರಗತಿಗಳ ಕಲಿಕೆಯ ಜೊತೆಗೆ, ಪ್ರಸ್ತುತ ಶೈಕ್ಷಣಿಕ ವರ್ಷದ ಪಠ್ಯಾಂಶಗಳನ್ನು ಸಂಯೋಜಿಸಿ, ತರಗತಿವಾರು ಕಲಿಕೆಯ ಪ್ರಕ್ರಿಯೆಗಳನ್ನು ಪರಿಣಾಮಕಾರಿಗೊಳಿಸುವುದು.
- ಪ್ರಸ್ತುತ ವರ್ಷದಲ್ಲಿ ವಿತರಿಸಲಾಗಿರುವ ತರಗತಿಗಳ ಪಠ್ಯ ಪುಸ್ತಕಗಳನ್ನು ಅಗತ್ಯತೆಗೆ ಅನುಗುಣವಾಗಿ ಅವಲೋಕಿಸಿ, ಪೂರಕ ಸಾಮಗ್ರಿಯಾಗಿ ಬಳಸಿಕೊಳ್ಳುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.
- **'ಓದು ಕರ್ನಾಟಕ, ಗಣಿತ ಕಲಿಕಾಂದೋಲನ, ಗಣಿತ ಕಿಟ್, ವಿಜ್ಞಾನ ಕಿಟ್, ವಿವಿಧ ಲ್ಯಾಬ್ ಚಟುವಟಿಕೆ, ತಂತ್ರಜ್ಞಾನ ಮಾಧ್ಯಮ, ಸೃಜನಾತ್ಮಕವಾಗಿ ಶಿಕ್ಷಕರೇ ತಯಾರಿಸಿದ ಕಲಿಕೋಪಕರಣಗಳ'** ಬಳಕೆಗಳೊಂದಿಗೆ ಕಲಿಕಾ ಚೇತರಿಕೆಯ ಕಲಿಕಾ ಹಾಳೆಗಳನ್ನು ಸಮನ್ವಯಗೊಳಿಸುವುದರ ಮೂಲಕ ಕಲಿಕೆಯನ್ನು ಬಲವರ್ಧನೆಗೊಳಿಸುವುದು.
- ಯಾವ ವಿದ್ಯಾರ್ಥಿಗಳು ನಿಗದಿಪಡಿಸಿದ ಚಟುವಟಿಕೆಗಳ ಕಲಿಕೆಯ ಫಲಗಳನ್ನು ಅತಿ ವೇಗವಾಗಿ ಸಾಧಿಸುವರೊ, ಅಂತಹ ಮಕ್ಕಳಿಗೆ ಪಠ್ಯ ಪುಸ್ತಕ, ಗ್ರಂಥಾಲಯ ಪುಸ್ತಕ, ಚಟುವಟಿಕೆಯ ಮೂಲೆ/ಸ್ಥಳಗಳು, ಹೊರಾಂಗಣ ಕಲಿಕಾ ಅವಕಾಶಗಳು ಹಾಗೂ ಇತರೆ ಸೃಜನಾತ್ಮಕ ಕಲಿಕಾ ಸಾಮಗ್ರಿಗಳೊಂದಿಗೆ ಬೆರೆತು ಕಲಿಯಲು ಪ್ರೇರೇಪಿಸುವಂತೆ ಶಿಕ್ಷಕರು ಕ್ರಮವಹಿಸಲು ಸೂಚಿಸುವುದು. ಸ್ವ ಅಧ್ಯಯನ ಚಟುವಟಿಕೆಗಳನ್ನು ಯೋಜಿಸಲು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು.

5. **ಜಿಲ್ಲಾ ಹಾಗೂ ಬ್ಲಾಕ್ ಹಂತದ ಮೇಲುಸ್ತುವಾರಿ ಅಧಿಕಾರಿಗಳ ಕರ್ತವ್ಯಗಳು:**

- ರಾಜ್ಯ ಹಂತದಿಂದ ಸರಬರಾಜುಗೊಂಡಿರುವ ಕಲಿಕೆಯ ಹಾಳೆಗಳು ಮತ್ತು ಶಿಕ್ಷಕರ ಕೈಪಿಡಿಗಳು ಪ್ರತೀ ಶಾಲೆಗಳಿಗೂ ತಲುಪಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು. ಶಾಲೆಗಳಿಗೆ ನಿಯಮಿತವಾಗಿ ಭೇಟಿ ನೀಡುವ ಮೂಲಕ ಕಲಿಕೆಯ ಹಾಳೆಗಳು ಸಮರ್ಪಕವಾಗಿ ಬಳಕೆಯಾಗುತ್ತಿರುವ ಬಗ್ಗೆ ಅನುಪಾಲನೆ ಕೈಗೊಳ್ಳುವುದು.
- ಪೋಷಕ ವರ್ಗ, ಎಸ್.ಡಿ.ಎಂ.ಸಿ. ಸದಸ್ಯ ವರ್ಗ ಹಾಗೂ ಸಮುದಾಯದ ಭಾಗೀದಾರರಲ್ಲಿ ಕಲಿಕಾ ಚೇತರಿಕೆ ಕುರಿತಂತೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನೆರವಾಗುವಂತೆ ಜಿಲ್ಲಾ ಹಂತದಿಂದ ಬ್ಲಾಕ್ ಹಂತಕ್ಕೆ ಪ್ರತ್ಯೇಕ ಮಾರ್ಗದರ್ಶನವನ್ನು ನೀಡುವುದು.
- ಸದರಿ ಜಾಗೃತಿ ಮೇಳಗಳಲ್ಲಿ ಶಿಕ್ಷಣಾಸ್ತಕರು ಸಹ ಭಾಗವಹಿಸಬಹುದಾಗಿದೆ. ಶಾಲೆಯ ಉತ್ತಮ ಆಚರಣೆಗಳನ್ನು ಮಕ್ಕಳ ಕಲಿಕಾ ಸಾಧನೆಯ ವಿಶೇಷ ಸಂಗತಿಗಳನ್ನು ಸಮುದಾಯ ವಲಯಕ್ಕೆ ಪ್ರದರ್ಶಿಸಲು ಈ ಮೇಳವನ್ನು ಮಾಧ್ಯಮವನ್ನಾಗಿ ಬಳಸಿಕೊಳ್ಳಬಹುದಾಗಿದೆ. ಈ ಬಗ್ಗೆ ಕ್ರಮವಹಿಸಲು ಜಿಲ್ಲಾ ಹಂತದ ಅಧಿಕಾರಿಗಳು ಬಿ.ಇ.ಓ ಹಾಗೂ ಬಿ.ಆರ್.ಸಿ.ಗಳೊಂದಿಗೆ ಸಮಾಲೋಚನ ಸಭೆಯನ್ನು ತುರ್ತು ಕೈಗೊಳ್ಳುವಂತೆ ತಿಳಿಸಿದೆ.
- ಸರ್ಕಾರಿ ಪ್ರೌಢ ಶಾಲೆ ಮತ್ತು ಪ್ರಾಥಮಿಕ ಶಾಲೆಗಳನ್ನು ದತ್ತು ಪಡೆದಿರುವ ಎಲ್ಲಾ ಮೇಲುಸ್ತುವಾರಿ ಅಧಿಕಾರಿಗಳು ಆಯಾಯ ಶಾಲೆಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ, ಹೆಚ್ಚು ಸಮಯವನ್ನು ಸದರಿ ಶಾಲೆಗಳಲ್ಲಿ ವಿನಿಯೋಗಿಸುವುದರ ಮೂಲಕ ಬೆಳವಣಿಗೆಗೆ ಶ್ರಮಿಸುವುದು. ಜಿಲ್ಲಾ ಹಂತದ ಮೇಲುಸ್ತುವಾರಿ ಅಧಿಕಾರಿಗಳು ದತ್ತು ಶಾಲೆಗಳ ಪ್ರಗತಿ ಬೆಳವಣಿಗೆ ಕುರಿತಂತೆ ಅನುಪಾಲನಾ ವರದಿಯನ್ನು ಪಡೆದು, ದೃಢೀಕರಿಸಿದ ಸಾಫ್ಟ್ ಪ್ರತಿಯನ್ನು ಡಿ.ಎಸ್.ಇ.ಆರ್.ಟಿ ಸಂಸ್ಥೆಗೆ ಸಲ್ಲಿಸುವುದು.

- ದೂರವಾಣಿ, ವಾಟ್ಸಪ್ ಅಥವಾ ಇತರೆ ಮಾಧ್ಯಮಗಳ ಮೂಲಕ ದತ್ತು ಶಾಲೆಗಳೊಂದಿಗೆ ನಿಯಮಿತ ಸಂಪರ್ಕವನ್ನು ಸಾಧಿಸಿ, ಮಾರ್ಗದರ್ಶನಕ್ಕೆ ಪೂರಕ ಬೆಂಬಲವನ್ನು ಒದಗಿಸುವುದು.
- ಶಾಲೆಗಳಿಗೆ ಭೇಟಿ ನೀಡುವಾಗ ತರಗತಿಯ ಕಲಿಕಾ ಪ್ರಕ್ರಿಯೆಯನ್ನು ಕಡ್ಡಾಯವಾಗಿ ವೀಕ್ಷಿಸಿ, ಲಭ್ಯವಾದ ವಿವರಗಳನ್ನು ಡಿ.ಎಸ್.ಇ.ಆರ್.ಟಿ ವಿನ್ಯಾಸಗೊಳಿಸಿದ ಶಾಲಾ ಸಂದರ್ಶನ ನಮೂನೆಯಲ್ಲಿ ದಾಖಲಿಸುವುದು.
- ಶಾಲಾ ಪ್ರಗತಿಯನ್ನು ದಾಖಲಿಸಲು **APP** ಅನ್ನು ಸಿದ್ಧಪಡಿಸುತ್ತಿದ್ದು, APP – dash board ನಲ್ಲಿ ದಾಖಲಾಗುವ ಸಂದರ್ಶನ ವರದಿಗಳ ಪೈಕಿ ಉಪನಿರ್ದೇಶಕರು, ಆಡಳಿತ ಮತ್ತು ಉಪನಿರ್ದೇಶಕರು, ಅಭಿವೃದ್ಧಿ ಇವರು ಶೇ.05ರಷ್ಟು ವರದಿಗಳನ್ನು, ಬಿ.ಇ.ಓ ಮತ್ತು ಬಿ.ಆರ್.ಸಿ.ಗಳು ಇವರು ಶೇ.10ರಷ್ಟು ವರದಿಗಳನ್ನು Validate ಮಾಡಿ ದೃಢೀಕರಿಸುವುದು.

ಅನುಪಾಲನೆ ಸಂಬಂಧ ಹೊರಡಿಸಲಾದ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ಪ್ರತೀ ಶಾಲೆಗಳಲ್ಲಿಯೂ ಕಾರ್ಯಗತಗೊಳಿಸುವಂತೆ ಅಗತ್ಯ ಕ್ರಮವಹಿಸಲು ಈ ಮೂಲಕ ನಿರ್ದೇಶಿಸಿದೆ. ಜಿಲ್ಲಾ ಹಾಗೂ ಬ್ಲಾಕ್ ಹಂತದ ಅನುಷ್ಠಾನಾಧಿಕಾರಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ಕಲಿಕಾ ಚೇತರಿಕೆ ಉಪಕ್ರಮದ ಆಶಯ ಮತ್ತು ಉದ್ದೇಶವನ್ನು ಸಾಕಾರಗೊಳಿಸುವ ಮೂಲಕ ಕೋವಿಡ್ ಸಾಂಕ್ರಾಮಿಕ ಸನ್ನಿವೇಶದಿಂದಾಗಿ ವಿದ್ಯಾರ್ಥಿಗಳಲ್ಲಿ ಉಂಟಾದ ಕಲಿಕಾ ಕೊರತೆಯನ್ನು ಸರಿದೂಗಿಸಲು ಶ್ರಮವಹಿಸುವಂತೆ ತಿಳಿಸಲಾಗಿದ್ದು, ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳ ಅನುಸರಣೆಗೂ ಆದ್ಯತೆ ನೀಡುವಂತೆ ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಪ್ರತಿಯನ್ನು ಗೌರವ ಪೂರಕವಾಗಿ ಸಲ್ಲಿಸಿದೆ

- ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ಇವರ ಆದ್ಯ ಗಮನ ಸೆಳೆಯಲು ಆಪ್ತ ಶಾಖೆಗೆ
- ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಆದ್ಯ ಗಮನ ಸೆಳೆಯಲು ಆಪ್ತ ಶಾಖೆಗೆ
- ಅಪರ ಆಯುಕ್ತರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗ ಇವರಿಗೆ

ಪ್ರತಿಯನ್ನು ಕ್ರಮಕ್ಕಾಗಿ ಮತ್ತು ಮಾಹಿತಿಗಾಗಿ ಸಲ್ಲಿಸಿದೆ

- ನಿರ್ದೇಶಕರು (ಗುಣಮಟ್ಟ), ಎಸ್.ಎಸ್.ಕೆ. ಹಾಗೂ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಮತ್ತು ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಸಾ.ಶಿ.ಇ., ಬೆಂಗಳೂರು ಇವರಿಗೆ
- ನಿರ್ದೇಶಕರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗ ಇವರಿಗೆ
- ಪಿ.ಎಂ.ಯು. ಸಮಿತಿಯಲ್ಲಿನ ಎಲ್ಲಾ ಸದಸ್ಯರಿಗೆ
- ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಆಡಳಿತ ಮತ್ತು ಉಪನಿರ್ದೇಶಕರು, ಅಭಿವೃದ್ಧಿ ಇವರಿಗೆ
- ಎಲ್ಲಾ ಬ್ಲಾಕ್‌ಗಳ ಬಿ.ಇ.ಓ ಮತ್ತು ಬಿ.ಆರ್.ಸಿ.ಗಳು ಇವರಿಗೆ

ಕರ್ನಾಟಕ Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4 100 FT RING ROAD, BANASHANKARI 3 RD STAGE BENGALURU - 560 085
Email: dpi dserd-ka@nic.in Website: http://dsert.kar.nic.in
Phone : 080 26980100
Fax 080 26422377

ಸಂಖ್ಯೆ: ಡಿ.ಎಸ್.ಇ.ಆರ್.ಟಿ/ಇ.ವಿ.ಜಿ/ಕ.ಚೇ.ಉ.ಅ/2022-23

ದಿನಾಂಕ: 16/08/2022

## ಜ್ಞಾಪನಾ

ವಿಷಯ: 2022-23 ನೇ ಶೈಕ್ಷಣಿಕ ವರ್ಷದಲ್ಲಿ ಅಳವಡಿಸಿರುವ 'ಕಲಿಕಾ ಚೇತರಿಕೆ' ಉಪಕ್ರಮವನ್ನು ಅನುಪಾಲನೆ ಮಾಡಲು DSERT ಅಧಿಕಾರಿಗಳು ಹಂಚಿಕೆ ಮಾಡುವ ಜಿಲ್ಲೆಗಳಿಗೆ ಭೇಟಿ ನೀಡುವ ಕುರಿತು.

ಉಲ್ಲೇಖ: 1. ದಿನಾಂಕ: 12.08.2022 ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕಲಿಕಾ ಚೇತರಿಕೆ ಕೋರ್ ಸಮಿತಿ ಸಭೆಯಲ್ಲಿ ತಿಳಿಸಿದಂತೆ

2. ಸುತ್ತೋಲೆ ಸಂಖ್ಯೆ: ಎಸ್.ಎಸ್.ಕೆ ಕಛೇರಿ ಸುತ್ತೋಲೆ: ಎಸ್.ಎಸ್.ಕೆ/ಗು.ಖಾ/ನಲ ಕಲಿ/ಪಿ.ಎಂ.ಯು 2022-23 ದಿನಾಂಕ: 30.07.2022

***********

ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕಲಿಕಾಚೇತರಿಕೆ ಉಪಕ್ರಮವನ್ನು ಯಶಸ್ವಿಯಾಗಿ ಶಾಲಾಹಂತದಲ್ಲಿ ಅನುಷ್ಠಾನಗೊಳಿಸಲು ಹಾಗೂ ಉಪಕ್ರಮದ ಪ್ರಗತಿಯನ್ನು ವಿಶ್ಲೇಷಿಸಿ, ಎಲ್ಲಾ ಜಿಲ್ಲೆಗಳಲ್ಲಿ ಅನುಪಾಲನೆಗೊಳಿಸಲು ಕಾರ್ಯ ಚಟುವಟಿಕೆಗಳನ್ನು ಯೋಜಿಸುವಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ನಿರ್ದೇಶನ ನೀಡಿರುತ್ತಾರೆ. ಅದರಂತೆ ಶಾಲಾಹಂತದಲ್ಲಿಉಪಕ್ರಮದ ಅಳವಡಿಕೆಯನ್ನು ವಿಶ್ಲೇಷಿಸಿ, ಅಗತ್ಯಕ್ಕೆ ಅನುಗುಣವಾಗಿ ಯೋಜನೆಯನ್ನು ಸಿದ್ಧಪಡಿಸಿ, ಜಿಲ್ಲೆ ಹಾಗೂ ಬ್ಲಾಕ್ ಹಂತದ ಹಾಗೂ ಕ್ಷೇತ್ರ ಮತ್ತು ಕ್ಲಸ್ಟರ್ ಹಂತದ ಅಧಿಕಾರಿಗಳು ಹಾಗೂ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವ ಅವಶ್ಯಕತೆಯ ಕುರಿತು ಉಲ್ಲೇಖಿತ ಸಭೆಯಲ್ಲಿ ಚರ್ಚಿಸಲಾಗಿದೆ.

ಆದ್ದರಿಂದ ಈ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಅನುಬಂಧದಲ್ಲಿ ಸೂಚಿಸಿರುವ ಜಿಲ್ಲೆಗಳಿಗೆ ಭೇಟಿ ನೀಡಿ ತರಗತಿ ಪ್ರಕ್ರಿಯೆಯನ್ನು ವೀಕ್ಷಿಸಿ, ಸದರಿ ಉಪಕ್ರಮವು ಶಾಲೆಗಳಲ್ಲಿ ಸಮರ್ಪಕವಾಗಿ ಅಳವಡಿಕೆಯಾಗುತ್ತಿರುವ ಬಗ್ಗೆ ಹಾಗೂ ಉಲ್ಲೇಖಿತ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ಆಯಾ ನೋಡಲ್ ಜಿಲ್ಲೆಗಳಲ್ಲಿ ಶಾಲಾ ಹಂತದಲ್ಲಿ ಅಳವಡಿಕೆಯಾಗುತ್ತಿರುವುದನ್ನು ಪರಿಶೀಲಿಸಿ 22/08/2022 ರೊಳಗೆ ವರದಿ ಮಾಡುವುದು. ಕಲಿಕಾ ಹಾಳೆಗಳು ಹಾಗೂ ಶಿಕ್ಷಕರ ಕೈಪಿಡಿಗಳ ಬಳಕೆ, ಕಲಿಕಾ ಚೇತರಿಕೆ ಉಪಕ್ರಮದನ್ವಯ ತರಗತಿ ಪ್ರಕ್ರಿಯೆ ಹಾಗೂ ಮೌಲ್ಯಮಾಪನ, ದಾಖಲೆಗಳ ನಿರ್ವಹಣೆ ಇತ್ಯಾದಿ ಅಂಶಗಳ ಕುರಿತು ಶಿಕ್ಷಕರಲ್ಲಿ ಉಂಟಾಗಿರುವ ಸಂದೇಹಗಳು ಹಾಗೂ ಉತ್ತಮ ತರಗತಿ ಪ್ರಕ್ರಿಯೆಗಳ ಕುರಿತು ಹಾಗೂ ಜಿಲ್ಲಾ ಹಂತದ ಕಲಿಕಾ ಚೇತರಿಕೆ ~~ಘಟಕ ಸ್ಥಾಪನೆ~~ ತಂಡ ರಚನೆ ಮತ್ತು ನಿರ್ವಹಣೆ ಕುರಿತು ವರದಿ ನೀಡಲು ಈ ಮೂಲಕ ತಿಳಿಸಿದೆ.

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು-85

ಗೆ,

1. ಉಪನಿರ್ದೇಶಕರು (ಟಿ.ಇ ವಿಭಾಗ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ಉಪನಿರ್ದೇಶಕರು (ಇ.ಟಿ ವಿಭಾಗ) ರವರಿಗೆ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ

ಪ್ರತಿಯನ್ನು:

ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಕೆ ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

# ಅನುಬಂಧ

ಕಲಿಕಾ ಚೇತರಿಕೆ ಉಪಕ್ರಮದ ಪರಿಣಾಮಕಾರಿ ಅನುಷ್ಠಾನ ಹಾಗೂ ಬಲವರ್ಧನೆಗಾಗಿ DSERT ಅಧಿಕಾರಿಗಳನ್ನು ನೋಡಲ್ ಜಿಲ್ಲೆಗಳಿಗೆ ನಿಯೋಜಿಸಿರುವ ಬಗ್ಗೆ.

| ಕ್ರ. ಸಂ | ಅಧಿಕಾರಿಯ ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ | ನಿಯೋಜಿತ ಜಿಲ್ಲೆಗಳ ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1 | ವಿ ಸುಮಂಗಲ, ನಿರ್ದೇಶಕರು | | |
| 2 | ಸಹ ನಿರ್ದೇಶಕರು | | |
| 3 | ನಾರಾಯಣ, ಉಪ-ನಿರ್ದೇಶಕರು (ETC) | ಬೀದರ್, ಯಾದಗಿರಿ, ಕಲಬುರಗಿ | |
| 4 | ಸಲೀಂ ಪಾಷ, ಉಪ-ನಿರ್ದೇಶಕರು (TE) | ಧಾರವಾಡ, ರಾಯಚೂರು, ಹಾವೇರಿ | |
| 5 | ಆರ್. ಮಂಜುನಾಥ<br>ಹಿರಿಯ ಸಹಾಯಕ ನಿರ್ದೇಶಕರು | ಮೈಸೂರು, ಚಾಮರಾಜನಗರ | |
| 6 | ಮಂಗಳ ಜಿ<br>ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ ಮತ್ತು ಉತ್ತರ, ಚಿಕ್ಕಬಳ್ಳಾಪುರ | |
| 7 | ವಿಶ್ವನಾಥ ಕೆ.ವಿ<br>ಹಿರಿಯ ಸಹಾಯಕ ನಿರ್ದೇಶಕರು | ದಾವಣಗೆರೆ, ಶಿವಮೊಗ್ಗ | |
| 8 | ಎಲ್. ಹೆಚ್. ಮುತ್ತಯ್ಯ<br>ಹಿರಿಯ ಸಹಾಯಕ ನಿರ್ದೇಶಕರು | ಕೊಪ್ಪಳ , ಬಳ್ಳಾರಿ | |
| 9 | ರಾಜೇಗೌಡ<br>ಹಿರಿಯ ಸಹಾಯಕ ನಿರ್ದೇಶಕರು | ಹಾಸನ, ಚಿಕ್ಕಮಗಳೂರು, | |
| 10 | ವಿನುತಾ ಬಿ.ಎಸ್<br>ಹಿರಿಯ ಸಹಾಯಕ ನಿರ್ದೇಶಕರು | ಬೆಂಗಳೂರು ಗ್ರಾಮಾಂತರ, ರಾಮನಗರ | |
| 11 | ಶುಭ ಮಂಗಳ ಆರ್. ವಿ<br>ಹಿರಿಯ ಸಹಾಯಕ ನಿರ್ದೇಶಕರು | ಉತ್ತರ ಕನ್ನಡ, ಶಿರಸಿ | |
| 12 | ಉಷಾ ಆರ್.ಕೆ<br>ಹಿರಿಯ ಸಹಾಯಕ ನಿರ್ದೇಶಕರು | ಕೋಲಾರ, ಮಂಡ್ಯ | |
| 13 | ಶಶಿಕಲಾ ಕೆ.ಬಿ<br>ಹಿರಿಯ ಸಹಾಯಕ ನಿರ್ದೇಶಕರು | ತುಮಕೂರು, ಮಧುಗಿರಿ | |
| 14 | ಸರ್ವಮಂಗಳ ವಿ ಮುತ್ತಿನ ಪೆಂಡಿ ಮಠ<br>ಹಿರಿಯ ಸಹಾಯಕ ನಿರ್ದೇಶಕರು | ಗದಗ, ಬೆಳಗಾಂ | |
| 15 | ರಾಧ ಪಿ<br>ಹಿರಿಯ ಸಹಾಯಕ ನಿರ್ದೇಶಕರು | ಉಡುಪಿ, ದಕ್ಷಿಣ ಕನ್ನಡ | |
| 16 | ಇಂದಿರಾ ಸಿ.ಎಸ್<br>ಹಿರಿಯ ಸಹಾಯಕ ನಿರ್ದೇಶಕರು | ಚಿಕ್ಕೋಡಿ | |
| 17 | ವಾಣಿ ಆರ್.ಕೆ, ಉಪನ್ಯಾಸಕರು | ಚಿತ್ರದುರ್ಗ | |
| 18 | ಗೀತಾ, ಉಪನ್ಯಾಸಕರು | ಕೊಡಗು | |
| 19 | ಶಂಕರೇ ಗೌಡ, ಉಪನ್ಯಾಸಕರು | ಬಿಜಾಪುರ, ಬಾಗಲಕೋಟೆ | |

ನಿರ್ದೇಶಕರು
ಡಿ.ಎಸ್. ಇ.ಆರ್.ಟಿ, ಬೆಂಗಳೂರು

# ಕಲಿಕಾ ಚೇತರಿಕೆ ಉಪಕ್ರಮ-2022-23

## ಶಾಲಾ ಸಂದರ್ಶನ ನಮೂನೆ

| ಕ್ರ. ಸಂ | ವಿವರ | ಮಾಹಿತಿ |
|---|---|---|
| 1 | ಶಾಲೆಯ ಡೈಸ್ ಸಂಖ್ಯೆ | |
| 2 | ಶಾಲೆಯ ಹೆಸರು ಮತ್ತು ವಿಳಾಸ | |
| 3 | ಮಾಧ್ಯಮ | |
| 4 | ಜಿಲ್ಲೆ | |
| 5 | ತಾಲ್ಲೂಕು | |
| 6 | ಕ್ಲಸ್ಟರ್ | |
| 7 | ಭೇಟಿಯ ದಿನಾಂಕ | |
| 8 | ಭೇಟಿ ನೀಡಿದ ಅಧಿಕಾರಿಯ ಹೆಸರು ಮತ್ತು ಪದನಾಮ | |
| 9 | ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ | |
| 10 | ಕಲಿಕಾ ಚೇತರಿಕೆ ತರಬೇತಿ ಪಡೆಯದಿರುವ ಶಿಕ್ಷಕರ ಸಂಖ್ಯೆ(ದೈ.ಶಿ.ಶಿ & ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) | |
| 11 | ತರಬೇತಿ ಪಡೆಯದಿರುವ ಶಿಕ್ಷಕರ ಹೆಸರು ಹಾಗೂ ಕೆ.ಜಿ.ಐ.ಡಿ ಸಂಖ್ಯೆ | |
| 12 | ತರಗತಿವಾರು ದಾಖಲಾತಿ/ಹಾಜರಾತಿ ಕೋಷ್ಟಕ-1 ರಲ್ಲಿ ನಮೂದಿಸುವುದು. | |
| 13 | ಕಲಿಕಾ ಚೇತರಿಕೆ ಕುರಿತ ಶಿಕ್ಷಕರ ಕೈಪಿಡಿ ಸರಬರಾಜಾಗಿದೆಯೇ? ಹೌದು/ಇಲ್ಲ ಕೋಷ್ಟಕ-2 ರಲ್ಲಿ ನಮೂದಿಸುವುದು. | |
| 14 | ಕಲಿಕಾ ಚೇತರಿಕೆ ಕುರಿತ ಕಲಿಕಾ ಹಾಳೆಗಳ ಸರಬರಾಜಾಗಿದೆಯೇ? ಹೌದು/ಇಲ್ಲ ಕೋಷ್ಟಕ-3 ರಲ್ಲಿ ನಮೂದಿಸುವುದು. | |
| 15 | ಭೇಟಿ ನೀಡಿದ ದಿನಾಂಕದವರೆಗೂ ಸಾಧಿಸಲಾಗಿರುವ ತರಗತಿವಾರು ವಿಷಯವಾರು ಕಲಿಕಾ ಫಲಗಳ ಸಂಖ್ಯೆಯನ್ನು ಕೋಷ್ಟಕ-4 ರಲ್ಲಿ ನಮೂದಿಸುವುದು. | |

| | | |
|---|---|---|
| 16 | **ಭೇಟಿ ನೀಡಿದ ಅಧಿಕಾರಿಗಳು ವೀಕ್ಷಿಸಿದ ತರಗತಿ ಪ್ರಕ್ರಿಯೆಯ ವಿವರ** | |
| ಅ | ವೀಕ್ಷಿಸಿದ ತರಗತಿ | |
| ಆ | ಶಿಕ್ಷಕರ ಹೆಸರು | |
| ಇ | ಶಿಕ್ಷಕರು ಅನುಕೂಲಿಸಿದ ವಿಷಯ | |
| ಈ | ತರಗತಿ ವೀಕ್ಷಣೆ ನಡೆಸಿದ ಒಟ್ಟು ಸಮಯ | |
| ಉ | ತರಗತಿಯಲ್ಲಿ ಅನುಕೂಲಿಸಿದ ಕಲಿಕಾ ಫಲ | |
| ಊ | ಕಲಿಕಾ ಫಲವನ್ನು ಸಾಧಿಸಲು ನಡೆಸಿದ ಚಟುವಟಿಕೆಗಳ ವಿವರ | |
| ಋ | ಕಲಿಕಾ ಹಾಳೆಗಳನ್ನು ತರಗತಿಯಲ್ಲಿ ಬಳಸಲಾಗುತ್ತಿದೆಯೇ? ಹೌದು/ಇಲ್ಲ | |
| ಎ | ಪಠ್ಯಪುಸ್ತಕವನ್ನು ಪೂರಕ ಸಾಮಗ್ರಿಯಾಗಿ ಬಳಸಲಾಗುತ್ತಿದೆಯೇ? | |
| ಏ | ವಿದ್ಯಾರ್ಥಿಗಳು ಉಪಯೋಗಿಸಿದ ಕಲಿಕಾ ಹಾಳೆಗಳನ್ನು ಕೃತಿ ಸಂಪುಟದಲ್ಲಿ ಸಮರ್ಪಕವಾಗಿ ನಿರ್ವಹಿಸಲಾಗಿದೆಯೇ? ಹೌದು/ಇಲ್ಲ | |
| 17 | ಮುಖ್ಯಶಿಕ್ಷಕರು ಕಲಿಕಾ ಚೇತರಿಕೆ ಉಪಕ್ರಮದ ತರಗತಿಯನ್ನು ವೀಕ್ಷಿಸಿದ್ದಾರೆಯೇ? ಹೌದಾದಲ್ಲಿ ನೀಡಿರುವ ಸಲಹೆಗಳು | |
| ಅ | ಮುಖ್ಯಶಿಕ್ಷಕರು ನೀಡಿದ ಸಲಹೆಗಳ ಅನುಪಾಲನೆ ಆಗಿದೆಯೇ? | |
| 18 | ಈ ಹಿಂದೆ ಭೇಟಿ ನೀಡಿದ ಅಧಿಕಾರಿಗಳು ನೀಡಿದ ಸಲಹೆಗಳ ಅನುಪಾಲನೆಯಾಗಿರುವ ಬಗ್ಗೆ ವಿವರ | |
| 19 | ಜಿಲ್ಲಾ ಹಾಗೂ ಬ್ಲಾಕ್ ಹಂತದ ಸಹಾಯವಾಣಿಯ ನೆರವು ಪಡೆಯಲಾಗಿದೆಯೇ? ಹೌದು/ಇಲ್ಲ | |
| 20 | ಶಾಲಾ ಹಂತದಲ್ಲಿ ಕಲಿಕಾ ಚೇತರಿಕೆ ಉಪಕ್ರಮವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುತ್ತಿರುವ ಬಗ್ಗೆ ವಿವರ | |
| 21 | ಭೇಟಿ ನೀಡಿದ ಅಧಿಕಾರಿಗಳ ಸಲಹೆ | |

ಶಾಲೆಯ ಮುಖ್ಯಶಿಕ್ಷಕರ ಸಹಿ

ಭೇಟಿ ನೀಡಿದ ಅಧಿಕಾರಿಯ ಸಹಿ

12 - ಕೋಷ್ಟಕ -1

| ತರಗತಿ | 1 | 2 | 3 | 4 | 5 | 6 | 7 | 8 | 9 | 10 |
|---|---|---|---|---|---|---|---|---|---|---|
| ದಾಖಲಾತಿ | | | | | | | | | | |
| ಹಾಜರಾತಿ | | | | | | | | | | |
| ವಿಶೇಷ ಮಕ್ಕಳ ಸಂಖ್ಯೆ | | | | | | | | | | |
| | | | | | | | | | | |

| 13 | ಕಲಿಕಾ ಚೇತರಿಕೆ ಕುರಿತ ಶಿಕ್ಷಕರ ಕೈಪಿಡಿ ಸರಬರಾಜಾಗಿದೆಯೇ? ಇಲ್ಲವಾದಲ್ಲಿ ಕೋಷ್ಟಕ -2ರಲ್ಲಿ X' ಗುರುತನ್ನು ನಮೂದಿಸುವುದು. | ಹೌದು/ಇಲ್ಲ |
|---|---|---|

ಕೋಷ್ಟಕ -2

| ತರಗತಿ | ಪ್ರ.ಭಾಷೆ | | | | | | | ದ್ವಿ.ಭಾಷೆ | ತೃ.ಭಾಷೆ | | ಗಣಿತ | ಇ.ವಿ.ಎಸ್/ವಿಜ್ಞಾನ | ಸಮಾಜ ವಿಜ್ಞಾನ |
|---|---|---|---|---|---|---|---|---|---|---|---|---|---|
| | ಕನ್ನಡ | ಇಂಗ್ಲೀಷ್ | ಉರ್ದು | ತೆಲುಗು | ತಮಿಳು | ಮರಾಠಿ | ಸಂಸ್ಕೃತ | ಇಂಗ್ಲೀಷ್ | ಹಿಂದಿ | ಸಂಸ್ಕೃತ | | | |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| 6 | | | | | | | | | | | | | |
| 7 | | | | | | | | | | | | | |
| 8 | | | | | | | | | | | | | |
| 9 | | | | | | | | | | | | | |

| 14 | ಕಲಿಕಾ ಚೇತರಿಕೆ ಕುರಿತ ಕಲಿಕಾ ಹಾಳೆಗಳ ಸರಬರಾಜಾಗಿದೆಯೇ? ಇಲ್ಲವಾದಲ್ಲಿ ಕೋಷ್ಟಕ -3ರಲ್ಲಿ 'X' ಗುರುತನ್ನು ನಮೂದಿಸುವುದು. | ಹೌದು/ಇಲ್ಲ |
|---|---|---|

ಕೋಷ್ಟಕ -3

| ತರಗತಿ | ಪ್ರ.ಭಾಷೆ | | | | | | | ದ್ವಿ.ಭಾಷೆ | ತೃ.ಭಾಷೆ | | ಗಣಿತ | ಇ.ವಿ.ಎಸ್/ವಿಜ್ಞಾನ | ಸಮಾಜ ವಿಜ್ಞಾನ |
|---|---|---|---|---|---|---|---|---|---|---|---|---|---|
| | ಕನ್ನಡ | ಇಂಗ್ಲೀಷ್ | ಉರ್ದು | ತೆಲುಗು | ತಮಿಳು | ಮರಾಠಿ | ಸಂಸ್ಕೃತ | ಇಂಗ್ಲೀಷ್ | ಹಿಂದಿ | ಸಂಸ್ಕೃತ | | | |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| 6 | | | | | | | | | | | | | |
| 7 | | | | | | | | | | | | | |
| 8 | | | | | | | | | | | | | |
| 9 | | | | | | | | | | | | | |

| 15 | ಭೇಟಿ ನೀಡಿದ ದಿನಾಂಕದವರೆಗೂ ಸಾಧಿಸಲಾಗಿರುವ ತರಗತಿವಾರು ವಿಷಯವಾರು ಕಲಿಕಾ ಫಲಗಳ ಸಂಖ್ಯೆಯನ್ನು ಕೋಷ್ಟಕ -4ರಲ್ಲಿ X' ಗುರುತನ್ನು ನಮೂದಿಸುವುದು. |
|---|---|

ಕೋಷ್ಟಕ -4

| ತರಗತಿ | ಪ್ರ.ಭಾಷೆ | | | | | | | ದ್ವಿ.ಭಾಷೆ | ತೃ.ಭಾಷೆ | | ಗಣಿತ | ಇ.ವಿ.ಎಸ್/ವಿಜ್ಞಾನ | ಸಮಾಜ ವಿಜ್ಞಾನ |
|---|---|---|---|---|---|---|---|---|---|---|---|---|---|
| | ಕನ್ನಡ | ಇಂಗ್ಲೀಷ್ | ಉರ್ದು | ತೆಲುಗು | ತಮಿಳು | ಮರಾಠಿ | ಸಂಸ್ಕೃತ | ಇಂಗ್ಲೀಷ್ | ಹಿಂದಿ | ಸಂಸ್ಕೃತ | | | |
| 1 | | | | | | | | | | | | | |
| 2 | | | | | | | | | | | | | |
| 3 | | | | | | | | | | | | | |
| 4 | | | | | | | | | | | | | |
| 5 | | | | | | | | | | | | | |
| 6 | | | | | | | | | | | | | |
| 7 | | | | | | | | | | | | | |
| 8 | | | | | | | | | | | | | |
| 9 | | | | | | | | | | | | | |